ಬುಡಸಮೇತ ಕೀಳತೊಡಗಿದಾಗ 'ನಿಲ್ಸಿ' ಎಂದು ಹಳೆಯ ಸಿನಿಮಾದ ಹೀರೋನಂತೆ ಎಂಟ್ರಿ ಕೊಟ್ಟರು ಜಗದೀಶ್. 'ಈ ನನ್ಮಕ್ಕದ್ದೆಂತ ನ್ಯಾಯದ ಸಂಪಾದನೆಯಾ? ಸರ್ಕಾರದ ಕಾಡು, ಬಯಲ್ನೆಲ್ಲ ನುಂಗಿ ಅಕೇಶಿಯಾ ಹಾಕಿದ್ದಲ್ದ? ಅಕೇಶ್ಯಾ ಹಾಕ್ರೆ ಅಂತರ್ಜಲ ಖಾಲಿ ಆಪುದಿಲ್ಯ?' ಎಂದು ಹಳೆಯ ಆರನೇ ತರಗತಿಯ ವಿಜ್ಞಾನದ ಪುಸ್ತಕದಿಂದ ಕದ್ದ ವಾದವನ್ನು ಹೂಡುತ್ತ ಎಗರೆಗರಿ ಬಿದ್ದ ಖುತುರಾಜನಿಗೆ ಎರಡೆಕರೆ ಬಿಡಬೇಕೆಂದೂ, ಉಳಿದ ಎರೆಡೆಕರೆ ಎಂಪಿಎಂನವರಿಗೆ ಮರಳಿ ಕೊಡಬೇಕೆಂದೂ ಅವರು ನ್ಯಾಯ ತೀರ್ಮಾನ ಮಾಡಿದರು. ಕದ್ದ ಮಾಲಿನಲ್ಲಿ ಅರ್ಧ ಕಳ್ಳನಿಗೆ ಎಂಬ, ಒಬ್ಬ ರಾಜಕಾರಣಿ ಮಾತ್ರ ಮಾಡಬಹುದಾದ ನ್ಯಾಯ ತೀರ್ಮಾನವನ್ನು ಕೇಳಿದ ಬಣಗಲು ಜನತೆ ಪ್ರಸನ್ನರಾಗಿ ತಮ್ಮತಮ್ಮ ಮನೆಗಳತ್ತ ನಡೆದರೆ, ರೂಪಾಯಿ ಬಂಡವಾಳವೂ ಇಲ್ಲದೆ ಆಸ್ತಿ ಗಿಟ್ಟಿಸಿದ ಖುತುರಾಜ ಜಗದೀಶರಿಗೊಂದು ಎಳೆನೀರನ್ನು ಸೆಲ್ಯೂಟಿನ ಜೊತೆಗೇ ಕೊಟ್ಟ. 'ನಿಮ್ಮೂರಲ್ಲಿ ಯಾರಿಗೆ ಏನೇ ಸಮಸ್ಯೆ ಬಂದ್ರೂ ಅದು ನನ್ ಸಮಸ್ಯೆ ಇದ್ದಂಗೆ ಕಣ್ರೋ' ಎಂಬ ಪಂಚಿಂಗ್ ಸಂದೇಶವೊಂದನ್ನು ಬಣಗಲಿನ ಮಹಾಜನತೆಗೆ ರವಾನಿಸಿದ ಜಗದೀಶರು ಇವತ್ತು ಕನಿಷ್ಠ ಇನ್ನೂರು ಮತಗಳನ್ನಾದರೂ ಸಂಪಾದಿಸಿದೆನೆಂದುಕೊಂಡು ಬೀಗುತ್ತಾ ಮರಳಿದರು.

ಇಂತಿಪ್ಪ ಖುತುರಾಜ ಪಕ್ಕದ ಮನೆಯ ರಾಚಯ್ಯ ಮೇಷ್ಟರ ತೋಟದ ರಸ್ತೆಗೆ ಉಣಗೋಲು ಜಡಿದದ್ದೇನೂ ಅಂಥಾ ದೊಡ್ಡ ಸುದ್ದಿಯಾಗಲಿಲ್ಲ.

* * *

ಇಷ್ಟು ದಿನ ಖುತುರಾಜ ಊರಿನಲ್ಲಿ ಮಾಡುತ್ತಿದ್ದ ಕಿತಾಪತಿಗಳ ಸುದ್ದಿಯನ್ನು ಅಪ್ಪ-ಅಮ್ಮನ ಬಾಯಲ್ಲಿ ಕೇಳಿ, ಯಾವುದೋ ಇನ್‌ಸ್ಟಾಗ್ರಾಂ ರೀಲಿನ ಹಾಸ್ಯ ನೋಡಿದಂತೆ ನಗುತ್ತಿದ್ದ ಬೆಂಗಳೂರಿಗ ಜೀತುವಿಗೀಗ ಆ ಹಾಸ್ಯದ ಪಾತ್ರವೇ ಹೊರಗೆ ಬಂದು ಗುದ್ದಿದಂತಾಯಿತು. ಆದರೂ ಸಾಫ್ಟ್‌ವೇರ್ ಇಂಜಿನಿಯರುಗಳ ತಂಡವೊಂದರ ಟೀಮ್ ಲೀಡಾಗಿದ್ದುಕೊಂಡು, ಆರು ತಿಂಗಳ ಪ್ರಾಜೆಕ್ಟನ್ನು ಮೂರು ತಿಂಗಳಲ್ಲಿ ಮುಗಿಸುವಂತೆ ತನ್ನ ಕೈ ಕೆಳಗಿನವರನ್ನು ಬಲವಂತದಿಂದ ಒಪ್ಪಿಸುವ, ಎಷ್ಟೆಲ್ಲ ಪ್ರತಿರೋಧಗಳ ನಡುವೆಯೂ ಅವರ ರಜೆಗಳನ್ನು ರದ್ದುಗೊಳಿಸಿ ಹನ್ನೆರಡು- ಹದಿಮೂರು ಗಂಟೆ ಗೇಯುವಂತೆ ಮಾಡುವ, ಅವರ ವೈಯಕ್ತಿಕ ಇಚ್ಛೆಗಳೆಲ್ಲವನ್ನೂ ಕಂಪನಿಯ ಹಿತಾಸಕ್ತಿಯ ದಾರಿಯಲ್ಲೇ ಸಾಗುವಂತೆ ಬಲವಂತವಾಗಿ ನಡೆಸುವವನಿಗೆ ಈ ಎಂಟಾಣೆಯ ಖುತುರಾಜನನ್ನು ಒಪ್ಪಿಸುವುದು ಕಷ್ಟವಲ್ಲ ಅನ್ನಿಸಿತು. ಗ್ರಾಮ ಪಂಚಾಯ್ತಿಯವರ ಮಾತಿಗೂ ಖುತು ಬಗ್ಗಲಿಲ್ಲ ಎಂಬುದು ಗೊತ್ತಾದಾಗ 'ನೋ ಪ್ರಾಬ್ಲಂ, ನಿಮಗೆಲ್ಲ ಮಾತಾಡೋಕೆ ಬರಲ್ಲ. ಐ ನೋ ಹೌ ಟೂ ಹ್ಯಾಂಡಲ್ ಹಿಮ್. ನಾನು ಬರ್ತೀನಿ ಮನೆಗೆ' ಎಂದ. ಆಗಲೇ ಮೇಷ್ಟರಿಗೆ ಎಡಗಣ್ಣು ಪಟಪಟಿಸಿದ್ದು.

ಹಾಗೆ ನೋಡಿದರೆ ಶಾಲಾ ದಿನಗಳ ಗೆಳೆಯನಾದ ಖುತುರಾಜ ಎಂಟು ವರ್ಷಗಳ ಕೆಳಗೆ ಪಕ್ಕದ ಮನೆಯನ್ನು ಖರೀದಿಸಿ ನೆರೆಯವನೇ ಆಗಿ ಬಂದಾಗ ಜೀತು ಒಳಗೊಳಗೇ ಖುಷಿಪಟ್ಟಿದ್ದ. ಮುಂದೆ ಅಪ್ಪ- ಅಮ್ಮನ ಕಾಲಾನಂತರ ತನ್ನ ಜಮೀನಿನ ಮೇಲ್ವಿಚಾರಣೆ ಮಾಡುವ ಪರಿಚಯಸ್ಥನೊಬ್ಬ ಮಗ್ಗುಲಲ್ಲೇ ಒದಗಿ ಬಂದಿದ್ದು ಭವಿಷ್ಯದಲ್ಲಿ ಒದೆಯಬೇಕಿರುವ ಚೆಂಡೊಂದು ತಾನಾಗೇ ಗೋಲಿಗೆ ಬಿದ್ದಂತೆನಿಸಿತ್ತು. ಆ ನಂಬಿಕೆಯಲ್ಲೇ ಖುತು ಆಗೀಗ ಕಷ್ಟ, ತುರ್ತು ಎಂದು ಕೇಳಿದಾಗೆಲ್ಲ ಎರಡು, ಮೂರು ಸಾವಿರ ಕೊಟ್ಟೂ ಇದ್ದ. ಆದರೀಗ ಅದೇ ಖುತು ತನ್ನ ಭವಿಷ್ಯದ ಗೋಲಿಗೆ ಕೀಪರ್ ಆಗಿ ಅಡ್ಡ ನಿಂತಿರುವುದು ಕಸಿವಿಸಿ ತಂದರೂ 'ಹೌ ಟೂ ಹ್ಯಾಂಡಲ್ ಹ್ಯೂಮನ್ ರಿಸೋರ್ಸ್' ಎಂಬ ಬಗ್ಗೆ ಐದಾರು ತಿಂಗಳಿಗೊಮ್ಮೆ ಕಂಪನಿಯವರು ಕೊಡುವ ತರಬೇತಿಯಲ್ಲಿ ಮಿಂದೆದ್ದಿರುವ ತಾನು ಪ್ರಖರ ಮಾತಿನ ಶೈಲಿಯ ಮೂಲಕ ಅವನನ್ನು ನಿಭಾಯಿಸಬಲ್ಲೆನೆಂದು ತನಗೆ ತಾನೇ ನಿರ್ಧರಿಸಿಕೊಂಡು ಹೊರಟು ಬಂದ.

* * *

'ಬೋಳೀಮಗ್ನೆ, ನಮ್ಮನಿ ಅಂಗ್ಳದಿಂದ ಹೊರ್ಗ್ ನಿಂತ್ ಮಾತಾಡ!'

ಮೊದಲ ಮಾತಿಗೇ ಖುತುರಾಜ 'ಯಾರ್ಕರ್' ಎಸೆದಾಗ ಜೀತು ತಬ್ಬಿಬ್ಬಾದ. ಇದುವರೆಗೆ ಎಷ್ಟೇ ಕಟುವಾಗಿ ಮಾತನಾಡಿದಾಗಲೂ ಅವನ ಕೈಕೆಳಗಿನ ಯಾವ ಇಂಜಿನಿಯರ್ರೂ ಹೀಗೆ ಪ್ರತಿಕ್ರಿಯಿಸಿರಲಿಲ್ಲ.